# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 88 (111) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 27-01-2026 |

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ನಕಲಿ ಬ್ರಾಂಡ್ ಹೊಂದಿರುವ ಸೂರತ್ ನ ಕಡಿಮೆ ದರದ ಸಿಂಥೆಟಿಕ್ ಸೀರೆಗಳ ಮಾರಾಟ ಹೆಚ್ಚುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ಪ್ರಸ್ತುತ ನಕಲಿ ಬ್ರಾಂಡ್ ಹೊಂದಿರುವ ಸೂರತ್‌ನ ಕಡಿಮೆ ದರದ ಸಿಂಥೆಟಿಕ್ ಸೀರೆಗಳ ಮಾರಟ ಹೆಚ್ಚುತ್ತಿರುವ ವಿಷಯದ ಬಗ್ಗೆ ಯಾವುದೇ ಪ್ರಕರಣಗಳು ಸರ್ಕಾರದಲ್ಲಿ ವರದಿಯಾಗಿರುವುದಿಲ್ಲ.<br><br>ಆದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕಿನ ನೇಕಾರರು ಸೂರತ್‌ನಲ್ಲಿ ತಯಾರಗುವ ಸಿಂಥೆಟಿಕ್ ಸೀರೆಗಳು ಬೆಂಗಳೂರಿನಲ್ಲಿ ತಂದು ಕಡಿಮೆ ದರದಲ್ಲಿ ಮಾರಟ ಮಾಡುತ್ತಿರುದಾಗಿ ದಿನಾಂಕ:27.11.2025 ರಂದು ನೇಕಾರರು ಮನವಿ ಸಲ್ಲಿಸಿದ್ದು, ಮನವಿಯಲ್ಲಿನ ನೇಕಾರರ ಬೇಡಿಕೆಗಳನ್ನು ಅವಲೋಕಿಸಲಾಗಿ, ವಿದ್ಯುತ್ ಮಗ್ಗದಲ್ಲಿ ಸಿಂಥೆಟಿಕ್ ನೂಲುಗಳಾದ ಪಾಲಿಸ್ಟರ್, ನೈಲಾನ್, ವಿಸ್ಕೂಸ್ ಮತ್ತು ಇತರೆ ನೂಲುಗಳನ್ನು ಉಪಯೋಗಿಸಿ ಸೀರೆಗಳನ್ನು ತಯಾರಿಸಬಹುದಾಗಿದೆ.<br><br>ದೇಶದ ಯಾವುದೇ ಭಾಗದಲ್ಲಿ ಯಾವುದೇ ರೀತಿಯ ಮಗ್ಗದಲ್ಲಿ ಸಿಂಥೆಟಿಕ್ ನೂಲನ್ನು ಉಪಯೋಗಿಸಿ ನೇಯ್ಗೆ ಮಾಡಿ ಮಾರಾಟ ಮಾಡಲು ಯಾವುದೇ ಕಾನೂನು ನಿರ್ಬಂಧಗಳು ಇರುವುದಿಲ್ಲ.<br><br>ಅದರಂತೆ, ಸೂರತ್, ಬೆಳಗಾವಿ ಮತ್ತು ರಾಜ್ಯದ ಇತರೆ ಭಾಗಗಳಲ್ಲಿ, ಆಧುನಿಕ ಮಾದರಿಯ ವಿದ್ಯುತ್ ಮಗ್ಗಗಳಾದ ರೇಪೀಯರ್, ಏರ್ ಜಟ್ , ವಾಟರ್ ಜಟ್ ಮತ್ತು ಪ್ರೋಜಕ್ಟ್ ಲೈನ್ ಮಗ್ಗಗಳಲ್ಲಿ ಬಟ್ಟೆ ಉತ್ಪದನೆಯನ್ನು ಮಾಡಲಾಗುತ್ತದೆ. ಇದರಿಂದ ನೇಕಾರರ ಉತ್ಪಾದನೆ ಹೆಚ್ಚಾಗಿ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಲಾಗುತ್ತದೆ. ಇದರಿಂದ ಹೆಚ್ಚು ಲಾಭವನ್ನು ಸಹ ನೇಕಾರರು ಪಡೆಯಬಹುದಾಗಿದೆ.<br><br>ಪ್ರಸ್ತುತ ಜಾಗತಿಕ ಮುಕ್ತ ಮಾರುಕಟ್ಟೆಯ ಬೇಡಿಕೆಯಂತೆ ಆಧುನಿಕ ಯಂತ್ರಗಳ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಬಟ್ಟೆ ಉತ್ಪಾದನೆಯನ್ನು ಮಾಡಲು ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳ ಮೂಲಕ ಉತ್ತೇಜನ / ಪ್ರೋತ್ಸಾಹವನ್ನು ನೀಡಲಾಗುತ್ತಿದೆ. |
| (ಆ) | ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳಿಂದ ಉತ್ಪಾದಿಸಲಾಗುವ ಯಾವ ಯಾವ ಉತ್ಪನ್ನಗಳಿಗೆ ಯಾವ ಯಾವ ಪ್ರದೇಶಗಳಿಗೆ ಭೌಗೋಳಿಕ ಸೂಚನೆಗಳನ್ನು ಗುರುತಿಸಲಾಗಿದೆ; | ಕೈಮಗ್ಗಗಳಿಂದ ಉತ್ಪಾದಿಸಲಾಗುವ ಪಾರಂಪರಿಕವಾಗಿ ವಿಶ್ವ ಮಾನ್ಯತೆ ಪಡೆದಿರುವ ರಾಜ್ಯ ಕೈಮಗ್ಗದ ಸಮಗ್ರ ಅಭಿವೃದ್ಧಿಗಾಗಿ ಕಾರ್ಯ ಯೋಜನೆಗಳಲ್ಲಿ ಇಳಕಲ್ ಸೀರೆ, ಗುಳೇದಗುಡ್ಡ ಖಣ, ಮೊಳಕಾಲ್ಮೂರು ರೇಷ್ಮೆ ಸೀರೆ ಮತ್ತು ಉಡುಪಿಯ ಕಾಟನ್ ಸೀರೆ, ಗಜೇಂದ್ರಗಡದ ಪಟ್ಟೆದಂಚಿನ ಸೀರೆ ಈ 5 ಉತ್ಪನ್ನಗಳನ್ನು ಜಿ.ಐ. ಕಾಯ್ದೆಯಡಿ ನೋಂದಣಿಯಾಗಿರುತ್ತದೆ. |

...2

| | | |
|---|---|---|
| (ಇ) | ರಾಜ್ಯದ ನೇಕಾರರು ಉತ್ಪಾದಿಸುವ ಉತ್ಪನ್ನಗಳಿಗೆ ಸೂಕ್ತವಾದ ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ? (ವಿವರ ನೀಡುವುದು) | ರಾಜ್ಯದ ಕೈಮಗ್ಗ ನೇಕಾರರು ಉತ್ಪಾದಿಸುವ ಕೈಮಗ್ಗ ಉತ್ಪನ್ನಗಳಿಗೆ ಈ ಕೆಳಕಂಡಂತೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>• ರಾಜ್ಯ ಸರ್ಕಾರದ ವತಿಯಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು / ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ತಯಾರಿಸಲಾದ ಕೈಮಗ್ಗ ಉತ್ಪನ್ನಗಳಿಗೆ ವರ್ಷದಲ್ಲಿ 365 ದಿನಗಳ ಅವಧಿಗೆ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೌಲ್ಯದ ಮೇಲೆ ಶೇಕಡ 20 ರಿಬೇಟ್ ಮಾರುಕಟ್ಟೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (National Handloom Development Programme-NHDP) ದಡಿ ರಾಷ್ಟೀಯ ಕೈಮಗ್ಗ ಮೇಳ (National Handloom Expo - NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (State Handloom Expo - SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (District Handloom Expo-DHE) ಗಳನ್ನು ಆಯೋಜಿಸಿ ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.<br>• ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಕೈಮಗ್ಗ ನೇಕಾರರಿಗೆ ಉತ್ಕೃಷ್ಟ ಗುಣಮಟ್ಟದ ರೇಷ್ಮೆ ಹಾಗೂ ಹತ್ತಿ ನೂಲನ್ನು ಸರಬರಾಜು ಮಾಡಿ, ಉತ್ಪಾದಿಸಲಾದ ಸಾಂಪ್ರದಾಯಿಕ ರೇಷ್ಮೆ ಸೀರೆ, ಉಡುಪಿ ಸೀರೆ, ಇಳಕಲ್ ಸೀರೆ ಹಾಗೂ ಇತರೆ ಕೈಮಗ್ಗ ಉತ್ಪನ್ನಗಳನ್ನು ನಿಗಮದ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿತವಾಗಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಮೂಲಕ ಮಾರಾಟ ಮಾಡಲಾಗುತ್ತಿದೆ.<br>• ಕೆ.ಹೆಚ್.ಡಿ.ಸಿ. ನಿಗಮದ ಕೈಮಗ್ಗ ಉತ್ಪನ್ನಗಳನ್ನು ಇ–ಕಾಮರ್ಸ್ ವೇದಿಕೆ ಮುಖಾಂತರ ಮಾರಾಟ ಮಾಡುವುದರ ಮೂಲಕ ಕೆ.ಹೆಚ್.ಡಿ.ಸಿ. ನಿಗಮ ತನ್ನ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವ ಯೋಜನೆ ಹಮ್ಮಿಕೊಂಡಿರುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಾಯೋಗಿಕವಾಗಿ ನೇಕಾರರ ಭವನದಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಯಲ್ಲಿ ಇ–ಕಾಮರ್ಸ್ ವೇದಿಕೆಯನ್ನು ಪ್ರಾರಂಭ ಮಾಡಲಾಗಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ.<br>• ಬೆಂಗಳೂರು ಅಂತರಾಷ್ಟ್ರೀಯ ನಿಲ್ದಾಣದ ಆವರಣದಲ್ಲಿ "ಕಲಾಲೋಕ" ಕೈಮಗ್ಗ ಮಾರಾಟ ಮಳಿಗೆಯನ್ನು ಸ್ಥಾಪಿಸಲಾಗಿದೆ. ಸದರಿ ಕಲಾಲೋಕ ಕೈಮಗ್ಗ ಮಾರಾಟ ಮಳಿಗೆಯ ಮುಖಾಂತರ ರಾಜ್ಯದ ಕೈಮಗ್ಗ ಉತ್ಪನ್ನಗಳನ್ನು ಹಾಗೂ ವಿಶ್ವವಿಖ್ಯಾತ ಸಾಂಪ್ರದಾಯಿಕ ಸೀರೆಗಳ ಮಾರಾಟಕ್ಕೆ ಸೌಲಭ್ಯ ಕಲ್ಪಿಸಲಾಗಿದೆ. |

**ಸಂಖ್ಯೆ: CI 16 JAKE 2026**

(ಶಿವಾನಂದ ಎಸ್. ಪಾಟೀಲ)

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು